**ಓಎಸ್. ನಂ.*162/2023***

**ಪಿಡಬ್ಲೂ:*01***

**ಇಂದು ದಿನಾಂಕ:*18.02.2025* ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ.ಎನ್.ಕೆ.ವಕೀಲರಿಂದಃ**

ನಾನು ಪದವಿ ವ್ಯಾಸಂಗ ಮಾಡಿದ್ದೇನೆ. ನಾನು ಮೈಸೂರಿನಲ್ಲಿ ಸಾಮಾಜಿಕ ಹೋರಾಗಗಾರ ಮತ್ತು ಆರ್.ಟಿ.ಐ.ನಲ್ಲಿ ಕೆಲಸಗಾರ ಎಂದರೆ ಸರಿ. ನಾನು ಮೈಸೂರಿನ ನ್ಯಾಯಾಲಯದಲ್ಲಿ ಎರಡು ಚೆಕ್ ಬೌನ್ಸ್ ಕೇಸುಗಳನ್ನು ಹಾಕಿದ್ದೇನೆ. ಕ್ರಯದ ಕರಾರು ಪತ್ರ ಆಧರಿಸಿ ಈ ಕೇಸನ್ನು ಹೋರತು ಪಡಿಸಿ ಬೇರೆ ಕೇಸನ್ನು ಹಾಕಿಲ್ಲ. ನನ್ನ ಖಾಯಂ ವಿಳಾಸ ತುಮಕೂರು ಜಿಲ್ಲೆಯ, ತುರುವೇಕೆರೆ. ಪ್ರತಿವಾದಿ 2021 ರಿಂದ ಪರಿಚಯವಿದೆ. ಪ್ರತಿವಾದಿ ಪಿರಿಯಾಪಟ್ಟಣ ತಾಲ್ಲೂಕು, ಆವರ್ಥಿ ಗ್ರಾಮದಲ್ಲಿ ವಾಸವಿದ್ದಾರೆ ಎಂದರೆ ಮೈಸೂರಿನ ಕುವೆಂಪುನಗರಲ್ಲಿಯೂ ವಾಸವಿರುತ್ತಾರೆ. ಪ್ರತಿವಾದಿ ಮೈಸೂರಿನ ಕುವೆಂಪುನಗರಲ್ಲಿ ವಾಸವಿರುವ ಬಗ್ಗೆ ದಾಖಲೆ ನೋಡಿಲ್ಲ. ಆವರ್ಥಿ ಗ್ರಾಮದಲ್ಲಿ ಇರುವ ಪ್ರತಿವಾದಿ ಮನೆ ನಂಬರ್ ಗೊತ್ತಿಲ್ಲ. ದಿನಾಂಕಃ 12-10-2022 ರಂದು ಪ್ರಥಮ ಬಾರಿಗೆ ದಾವಾ ಆಸ್ತಿಯನ್ನು ನೋಡಿದ್ದೇನೆ, ಆಗ ಎಷ್ಟು ಸಮಯವಾಗಿತ್ತು ಅಂತ ಗೊತ್ತಿಲ್ಲ. ದಾವಾ ಆಸ್ತಿಯ ಅಕ್ಕಪಕ್ಕದಲ್ಲಿ ಇರುವ ಸರ್ವೆ ನಂಬರ್ ಗೊತ್ತಿಲ್ಲ. ರಾಜಣ್ಣ ಎಂಬುವವರು ಪ್ರತಿವಾದಿಯನ್ನು ನನಗೆ ಪರಿಚಯ ಮಾಡಿಕೊಟ್ಟಿದ್ದಾರೆ. ಕರಾರು ಪತ್ರವನ್ನು ಪಿರಿಯಾಪಟ್ಟಣದಲ್ಲಿ ಬರೆಸಲು ತೊಂದರೆ ಇರಲಿಲ್ಲ. ಕರಾರು ಪತ್ರಕ್ಕೆ ಸಾಕ್ಷಿ ಹಾಕಿರುವ ಇಬ್ಬರು ವ್ಯಕ್ತಿಗಳು ನನಗೆ ಪರಿಚಯಸ್ಥರು ಎಂದರೆ ಸರಿ.

ಕರಾರು ಪತ್ರವನ್ನು 12.00 ಗಂಟೆ ಮೇಲೆ ಬರೆಯಲಾಗಿದೆ. ಪ್ರತಿವಾದಿಗೆ ನಾನು ರೂ.2,80,000/- ರೂಪಾಯಿಯನ್ನು ಕುವೆಂಪುನಗರದ State bank of India ಚೆಕ್ ನಂ.559786 ಮೂಲಕ ಅದೇ ದಿನಾಂಕ ರಂದು ಕೊಟ್ಟಿದ್ದೇನೆ. ಉಳಿದ 20 ಸಾವಿರ ನಗದು ಕೊಟ್ಟಿದ್ದೇನೆ. 20 ಸಾವಿರ ನಗದು ಹಾಗೂ ರೂ.2,80,000/- ಚೆಕ್ ಮೂಲಕ ಕೊಟ್ಟಿರುವುದನ್ನು ಹೊರತು ಪಡಿಸಿ ಪ್ರತಿವಾದಿಗೆ ಬೇರೆ ಯಾವುದೇ ಹಣ ಕೊಟ್ಟಿಲ್ಲ ಎಂದರೆ ಸರಿ. ಪ್ರತಿವಾದಿಗೆ ನಾನು ಕೊಟ್ಟಿರುವ ಚೆಕ್ ಮತ್ತು ಅದರ ಬಗ್ಗೆ ವಿವರಗಳನ್ನು ಕರಾರು ಪತ್ರದಲ್ಲಿ ನಮೂದಿಸಲು ತೊಂದರೆ ಇರಲಿಲ್ಲ. ರೂ.2,80,000 ರೂಪಾಯಿ ಚೆಕ್ ಮೂಲಕ ಕೊಟ್ಟಿರುವ ಬಗ್ಗೆ ಪತ್ರ ಬರಹಗಾರರಿಗೆ ಹೇಳಿರಲಿಲ್ಲ.

ಪ್ರತಿವಾದಿಗೆ ನಾನು ಚೆಕ್ ಕೊಟ್ಟಿರುವುದನ್ನು ಸಾಕ್ಷಿಗಳು ನೋಡಿದ್ದಾರೆ. 1 ತಿಂಗಳ ಒಳಗೆ ಉಳಿಕೆ ಹಣ ಕೊಟ್ಟು ಕ್ರಯ ಪತ್ರ ನೋಂದಣಿ ಮಾಡಿಸಿಕೊಳ್ಳಲು ನಾನು ಸಿದ್ದನಾಗಿದ್ದೆ. ಎಲ್ಲಾ ಮೂಲ ದಾಖಲೆಗಳ ಜೆರಾಕ್ಸ್ ಪ್ರತಿಯನ್ನು ನನಗೆ ಕೊಟ್ಟಿರುವುದಾಗಿ ಕರಾರು ಪತ್ರದಲ್ಲಿ ಬರೆದಿರುವಾಗ ಕ್ರಯ ಪತ್ರವನ್ನು ಬರೆಸಿಕೊಳ್ಳಲು ತೊಂದರೆ ಇತ್ತೇ ಎಂದರೆ ದಿನಾಂಕಃ16-11-2022 ರಂದು ಪ್ರತಿವಾದಿಯನ್ನು ನನ್ನ ಜೊತೆ ಕರೆದುಕೊಂಡು ಪಿರಿಯಾಪಟ್ಟಣದ ಉಪನೊಂದಣಾಧಿಕಾರಿ ಕಚೇರಿಗೆ ಬಂದಿದ್ದೇವು. ಆ ಸಮಯದಲ್ಲಿ ಪ್ರತಿವಾದಿ ತನಗೆ ಹೆಚ್ಚಿನ ಹಣ ಬೇಕೆಂದು ಪತ್ರ ನೋಂದಣಿ ಮಾಡಿಸಿದೆ ಹೋರಟಿ ಹೋದರು. ನೋಂದಣಿ ಮಾಡಿಸಲು ಸಿದ್ದ ಪಡಿಸಿದ ಕ್ರಯ ಪತ್ರಕ್ಕೆಪ್ರತಿವಾದಿ ಸಹಿ ಹಾಕಿದ್ದರು. ಪ್ರತಿವಾದಿ ಸಹಿ ಹಾಕಿದ್ದ ಪತ್ರವನ್ನು ಉಪನೊಂದಣಾಧಿಕಾರಿಯವರಿಗೆ ಕೊಟ್ಟಿಲ್ಲ. ಪ್ರತಿವಾದಿ ನನ್ನಿಂದ ಹೆಚ್ಚು ಹಣಕ್ಕೆ ಬೇಡಿಕೆ ಇಟ್ಟಿದ್ದರೆಂದು ಕೇಸು ಹಾಕುವ ಕಾಲಕ್ಕೆ ನಮ್ಮ ವಕೀಲರಿಗೆ ತಿಳಿಸಿದ್ದೆ. ಪ್ರತಿವಾದಿಯ ಪತ್ನಿ ಮತ್ತು ಮಕ್ಕಳ ಹೆಸರು ಗೊತ್ತಿಲ್ಲ. 1 ತಿಂಗಳ ಅವಧಿಯಲ್ಲಿ ರೂ.6,50,000/- ಹಣ ಇತ್ತು ಎಂದು ತೋರಿಸಲು ನನ್ನ ಬಳಿ ದಾಖಲೆ ಇದೆ. ಸಾಕ್ಷಿಯು ಸ್ವತಃ ಹೇಳುವುದೇನೆಂದರೆ ಉಳಿಕೆ ಹಣ ರೂ.3,50,000/- ಹಣ ಮಾತ್ರ ಕೊಡಬೇಕಾಗಿತ್ತು. ದಾವಾ ಆಸ್ತಿಯನ್ನು ಪ್ರತಿವಾದಿಗೆ ಮಾರಾಟ ಮಾಡಿರುವ ನಾಗೇಗೌಡರ ರವರ ಮಕ್ಕಳು ದಾವಾ ಆಸ್ತಿಗೆ ಸಂಬಂಧಿಸಿದಂತೆ ಅಸಲು ದಾವಾ ಸಂಖ್ಯೆ-32/2015 ರಂತೆ ಇದೆ ನ್ಯಾಯಾಲಯದಲ್ಲಿ ಕೇಸು ಹಾಕಿದ್ದು ದಿನಾಂಕಃ 09-02-2024 ರವರೆಗೆ ಬಾಕಿ ಇತ್ತು ಎಂದರೆ ಗೊತ್ತಿಲ್ಲ. ಆ ಕೇಸು ವಜಾ ಆಗಿದ್ದು ಹುಣಸೂರಿನ ನ್ಯಾಯಾಲಯದಲ್ಲಿ ಮೆಲ್ಮನವಿ ಸಲ್ಲಿಸಿದ್ದಾರೆ ಎಂದರೆ ಗೊತ್ತಿಲ್ಲ. ದಿನಾಂಕಃ 30-11-2020 ರಂದು ನಮ್ಮ ವಕೀಲರಿಂದ ನೋಟೀಸ್ ಕೊಡಿಸಿದ್ದೇನೆ. ನನ್ನ ವಾದ ಪತ್ರದಲ್ಲಿ ಪ್ರತಿವಾದಿಗಳಿಗೆ ನೋಟೀಸ್ ಕೊಡಿಸಿರುವ ದಿನಾಂಕವನ್ನು ಖಾಲಿ ಬಿಡಲಾಗಿದೆ ಎಂದರೆ ಸರಿ. ವಕೀಲರಾದ ಶ್ರೀ.ನಿಂಗರಾಜು ರವರ ಮೂಲಕ ನೋಟೀಸ್ ಕೊಡಿಸಿದೆ, ಅವರ ಕಚೇರಿ ಮೈಸೂರಿನ ಹೆಬ್ಬಾಳಿನಲ್ಲಿ ಇದೆ. ನಿ.ಪಿ.5 ರಲ್ಲಿ ಇರುವ ವಕೀಲರ ವಿಳಾಸ ಹಾಗೂ ಪ್ರತಿವಾದಿಯಿಂದ ವಾದಿ ವಕೀಲರ ವಿಳಾಸಕ್ಕೆ ಕಳುಹಿಸಿದ ಆರ್.ಪಿ.ಎ.ಡಿ. ಲಕೋಟೆಯಲ್ಲಿನ ವಿಳಾಸವನ್ನು ನೋಡಿ ಸಾಕ್ಷಿಯೂ ಆ ಎರಡು ವಿಳಾಸಗಳು ಒಂದೇ ಆಗಿವೆ ಎಂದು ಒಪ್ಪಿಕೊಂಡ ಮೇರೆಗೆ ಆರ್.ಪಿ.ಎ.ಡಿ. ಲಕೋಟೆಯನ್ನು **ನಿ.ಡಿ.1** ಎಂದು ಗುರುತಿಸಲಾಯಿತು.

ದಾವಾ ಆಸಿತಯ ದಕ್ಷಿಣ ದಿಕ್ಕಿಗೆ ಟಾರ್ ರೋಡ್ ಇದೆ ಎಂದರೆ ಸರಿಯಲ್ಲ, ಮಣ್ಣಿನ ರಸ್ತೆ ಇದೆ. ದಾವಾ ಆಸ್ತಿಗೆ 5 ಲಕ್ಷ ರೂಪಾಯಿ ಬೆಲೆ ಬಾಳುತ್ತದೆ ಎಂದರೆ ಸುಳ್ಳು. ಪ್ರತಿವಾದಿ ಆಸ್ತಿಯನ್ನು ಮಾರಾಟ ಮಾಡಿರುವ ನಾಗೇಗೌಡರು ದಾವಾ ಆಸ್ತಿಗೆ ತೊಂದರೆ ಕೊಡುತ್ತಿದ್ದಾರೆ ಎಂಬ ಕಾರಣಕ್ಕೆ ಪ್ರತಿವಾದಿ ಪಿರಿಯಾಪಟ್ಟಣದ ಕಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಶಾಶ್ವತ ನಿರ್ಭದಕಾಜ್ಞನೆಯನ್ನು ಸಲ್ಲಿಸಿದ್ದಾರೆ ಎಂದರೆ ಗೊತ್ತಿಲ್ಲ. ದಾವಾ ಆಸ್ತಿಯನ್ನು ಮಾರಾಟ ಮಾಡುವ ಉದ್ದೇಶ ಪ್ರತಿವಾದಿಗೆ ಇರಲಿಲ್ಲ ಎಂದರೆ ಸುಳ್ಳು. ಪ್ರತಿವಾದಿ ತನ್ನ ತುರ್ತು ಅವಶ್ಯಕತೆಗಾಗಿ ನನ್ನಿಂದ 1 ಲಕ್ಷ ರೂಪಾಯಿ ಕೈ ಸಾಲ ಪಡೆದಿದ್ದರು ಅದರೆ ನಾನು ಪ್ರತಿವಾದಿಯಿಂದ ಹಲವಾರು ಖಾಲಿ ದಾಖಲೆಗಳಿಗೆ ಸಹಿ ಪಡೆದುಕೊಂಡು ಕ್ರಯದ ಕರಾರು ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಕರಾರು ಪತ್ರಕ್ಕೆ ಪಿರಿಯಾಪಟ್ಟಣದವರು ಸಾಕ್ಷಿಯಾಗಿಸಲು ಪ್ರಯತ್ನಿಸಿಲ್ಲ. ಪ್ರತಿವಾದಿಗೆ ಚೆಕ್ ಮೂಲಕ ಹಣ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಬೆಲೆ ಬಾಳುವ ದಾವಾ ಆಸ್ತಿಯನ್ನು ಹೊಡೆದುಕೊಳ್ಳಬೇಕೆಂಬ ಉದ್ದೇಶದಿಂದ ನಾನು, ನನ್ನ ಸ್ನೇಹಿತ ಮತ್ತು ಪತ್ರ ಬರಹಗಾರರು ಸೃಷ್ಟಿ ಮಾಡಿಕೊಂಡು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ನನಗೆ ಯಾವುದೇ ಕ್ರಯದ ಕರಾರು ಪತ್ರ ಬರೆದುಕೊಟ್ಟಿಲ್ಲ ಎಂದರೆ ಸುಳ್ಳು.

**ಮರು ವಿಚಾರಣೆ ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

**ಓ.ಹೆ.ಕೆ.ಸರಿ ಇದೆ.**

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ**